# ಕುವೆಂಪು ವಿಶ್ವವಿದ್ಯಾಲಯ

ಡಾ. ಉದ್ದಗಟ್ಟಿ ವೆಂಕಟೇಶ್
ಸಂಚಾಲಕರು
ಮೊಬೈಲ್ ಸಂಖ್ಯೆ: 9980190713

ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ಘಟಕ
ಜ್ಞಾನಸಹ್ಯಾದ್ರಿ, ಶಂಕರಘಟ್ಟ.
ಇಮೈಲ್: *scstcellkuvempu@gmail.com*

ಸಂಖ್ಯೆ: ಕುವಿ/ಪ.ಜಾ:ಪ.ಪಂ.ಘ/ **126** /2023-24/

ದಿನಾಂಕ: 31-08-2023

## ಸುತ್ತೋಲೆ

ವಿಷಯ:- 2022-23ನೇ ಸಾಲಿನಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸದೇ ಇರುವ ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಮಾಹಿತಿಯನ್ನು ಸಲ್ಲಿಸುವ ಕುರಿತು.

ಉಲ್ಲೇಖ:- ಸಹಾಯಕ ನಿರ್ದೇಶಕರು (ಗ್ರೇಡ್-1), ಸಮಾಜ ಕಲ್ಯಾಣ ಇಲಾಖೆ, ಭದ್ರಾವತಿ ಇವರ ಇ-ಮೇಲ್ ದಿನಾಂಕ: 30-08-2023

-*-*-*-

ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದ ವಿದ್ಯಾರ್ಥಿ/ಸಂಶೋಧನಾರ್ಥಿಗಳಿಗೆ, 2022-23ನೇ ಸಾಲಿನ ಪ್ರವೇಶಾತಿಯಲ್ಲಿ ಪೋಷಕರ ಆದಾಯದ ಮಿತಿ ರೂ. 2.5 ಲಕ್ಷದೊಳಗಿರುವ ವಿದ್ಯಾರ್ಥಿ/ಸಂಶೋಧನಾರ್ಥಿಗಳಿಗೆ ಶುಲ್ಕ ವಿನಾಯಿತಿ ನೀಡಿದ್ದಲ್ಲಿ, ಸದರಿ ಸಾಲಿನಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಕ್ಕೆ, **ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶ (SSP) ನಿಗದಿಪಡಿಸಿರುವ ದಿನಾಂಕದೊಳಗೆ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸದೇ ಇರುವ ವಿದ್ಯಾರ್ಥಿ/ಸಂಶೋಧನಾರ್ಥಿಗಳ ಮಾಹಿತಿಯನ್ನು (ದಿನಾಂಕ: 30-08-2023 ರಲ್ಲಿದ್ದಂತೆ)** ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿ ಸಲ್ಲಿಸುವಂತೆ ಉಲ್ಲೇಖಿತ ಇ-ಮೇಲ್‌ನಲ್ಲಿ ಸಹಾಯಕ ನಿರ್ದೇಶಕರು (ಗ್ರೇಡ್-1), ಸಮಾಜ ಕಲ್ಯಾಣ ಇಲಾಖೆ, ಭದ್ರಾವತಿ ಇವರು ಕೋರಿರುತ್ತಾರೆ.

ಈ ಸಂಬಂಧ ಸದರಿಯವರು ಸಲ್ಲಿಸಿರುವ ನಮೂನೆಯನ್ನು ಈ ಕೆಳಕಂಡಂತೆ ನೀಡಲಾಗಿದ್ದು, ಸಮಾಜ ಕಲ್ಯಾಣ ಇಲಾಖೆ, ಭದ್ರಾವತಿ ಇವರು ತುರ್ತಾಗಿ ಸಲ್ಲಿಸಲು ತಿಳಿಸಿರುವ ಹಿನ್ನಲೆಯಲ್ಲಿ, ಈ ವಿಷಯವನ್ನು ಅತ್ಯಂತ ತುರ್ತು ಎಂದು ಪರಿಗಣಿಸಿ, **ಮರುಟಪಾಲಿನಲ್ಲಿ ಹಾರ್ಡ್ ಕಾಪಿಯನ್ನು** ಈ ಕಛೇರಿಗೆ ಕಳುಹಿಸುವಂತೆ ಹಾಗೂ ಸಾಫ್ಟ್ ಕಾಪಿಯನ್ನು ಘಟಕದ ಇ-ಮೇಲ್ ವಿಳಾಸ *scstcellkuvempu@gmail.com* ಗೆ ಕಳುಹಿಸುವಂತೆಯೂ ಕೋರಿದೆ. ಒಂದು ವೇಳೆ ಶುಲ್ಕ ವಿನಾಯಿತಿ ಪಡೆದ ವಿದ್ಯಾರ್ಥಿ/ಸಂಶೋಧನಾರ್ಥಿಗಳು ಯಾರು ಇಲ್ಲದಿದ್ದಲ್ಲಿ, **"ಇರುವುದಿಲ್ಲ"** ಎಂದೂ ತಿಳಿಸುವಂತೆ ಸಹ ಕೋರಿದೆ.

**ನಮೂನೆ**

| ಕ್ರ ಸಂ | ವಿದ್ಯಾರ್ಥಿಯ ಹೆಸರು | ಕೋರ್ಸ್ | ಸೆಮಿಸ್ಟರ್ ಸಂಖ್ಯೆ | ವಿದ್ಯಾರ್ಥಿಯ ಐ.ಡಿ. | ಸಿಇಟಿ. ಸಂಖ್ಯೆ (ಎಂಬಿಎ & ಎಂಸಿಎ) | ಷರಾ |
|---|---|---|---|---|---|---|
| 1. | | | | | | |

ಸಂಚಾಲಕರು
ಸಂಚಾಲಕರು
ಪರಿಶಿಷ್ಟಜಾತಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ಘಟಕ
ಕುವೆಂಪು ವಿಶ್ವವಿದ್ಯಾಲಯ
ಜ್ಞಾನ ಸಹ್ಯಾದ್ರಿ, ಶಂಕರಘಟ್ಟ - 577 451

ಗೆ,

ಎಲ್ಲಾ ಸ್ನಾತಕೋತ್ತರ ವಿಭಾಗಗಳ ಅಧ್ಯಕ್ಷರು / ಮುಖ್ಯಸ್ಥರು, ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ.
ಸಂಯೋಜನಾಧಿಕಾರಿಗಳು, ಸ್ನಾತಕೋತ್ತರ ಕೇಂದ್ರ, ಕಡೂರು / ಚಿಕ್ಕಮಗಳೂರು.
ಪ್ರಾಂಶುಪಾಲರು, ಸಹ್ಯಾದ್ರಿ ಕಲಾ / ವಿಜ್ಞಾನ / ವಾಣಿಜ್ಯ ಕಾಲೇಜು
ನಿರ್ದೇಶಕರು, ಯುಸಿಸಿಎಫ್ ಮತ್ತು ಐಟಿ ಘಟಕ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ – ವಿಶ್ವವಿದ್ಯಾಲಯದ ಅಧಿಕೃತ ಅಂತರ್ಜಾಲದಲ್ಲಿ ಪ್ರಕಟಿಸುವಂತೆ ಕೋರಲಾಗಿದೆ.